# ನಾಣ್ಯಗಳಲ್ಲಿನ ಮೆಕ್ಯಾನಿಸಂ!




ರಷ್ಯಾ ದೇಶದ ರೋಮನ್ ಬೂಟೀನ್‌ನ ಕಲೆಯನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಈತ ಕೈಯಿಂದ ನಾಣ್ಯಗಳ ಕೆತ್ತನೆ ಮಾಡುವ ಮಾಸ್ಟರ್ ಎನ್ನುವುದನ್ನು ಎಲ್ಲರೂ ಒಪ್ಪುವುದರಲ್ಲಿ ಎರಡು ಮಾತಿಲ್ಲ. ಆದರೆ ಈತನ ಹಲವಾರು ಮೇರು ಕಲಾಕೃತಿಗಳಲ್ಲಿರುವ ಮೆಕ್ಯಾನಿಕಲ್ ಅದ್ಭುತಗಳನ್ನು ನೋಡಿದವರೆಲ್ಲಾ ನಿಬ್ಬೆರಗಾಗುವುದು ಖಂಡಿತ!

ರೋಮನ್‌ನ ಕಲಾ ಕೌಶಲ್ಯಕ್ಕೆ ಜನರು ಮರುಳಾಗುವುದಕ್ಕೆ ಇತ್ತೀಚಿನ ಕೆಲವು ನಾಣ್ಯಗಳ ಸೃಷ್ಟಿ ಅತ್ಯುತ್ತಮ ಉದಾಹರಣೆಗಳಾಗಿ ನಿಲ್ಲುತ್ತವೆ! ಬೆಳ್ಳಿಯ ಡಾಲರ್ ಒಂದರಲ್ಲಿ ಮಹಿಳೆ ಮತ್ತು ಯೋಧನನ್ನು ವಿವರವಾಗಿ ಕೆತ್ತನೆ ಮಾಡಿರುವ ಚಿತ್ರಣವಿದೆ. ರೋಮನ್, ತನ್ನ ಇನ್‌ಸ್ಟಾಗ್ರಾಂ ನಲ್ಲಿ ಪೋಸ್ಟ್ ಮಾಡಿದ ವಿಡಿಯೊವನ್ನು ವೀಕ್ಷಿಸಿದಾಗ ಬೆಳ್ಳಿ ಡಾಲರ್‌ನಲ್ಲಿರುವ ಯೋಧನ ಒರೆಯಲ್ಲಿರುವ ಪುಟ್ಟ ಕತ್ತಿಯನ್ನು ಹೊರ ತೆಗೆಯಬಹುದಾಗಿದೆ. ಅದನ್ನು ನಾಣ್ಯದ ಹೊರಭಾಗದಲ್ಲಿನ ಪುಟ್ಟ ರಂಧ್ರದಲ್ಲಿ ಸಿಕ್ಕಿಸಿದರೆ ಮಹಿಳೆ ಹತ್ತಿರವಿರುವ ತಗ್ಗಾದ ಜಾಗದಲ್ಲಿ ಅಡಗಿರುವ ಚಿನ್ನದ ಕವಚವನ್ನು ಬಹಿರಂಗಪಡಿಸಬಹುದು. ಇದು ರೋಮನ್ ಬೂಟೀನ್ ಇತ್ತೀಚಿನ ವರ್ಷಗಳಲ್ಲಿ ಮಾಡಿರುವ ಮೆಕ್ಯಾನಿಕಲ್ ಕಲಾ ಕೌಶಲ್ಯವನ್ನು ಬಿಂಬಿಸುವ ಕೈಗನ್ನಡಿಯಾಗಿದೆ!




ಬೂಟೀನ್‌ನ ಬತ್ತಳಿಕೆಯಲ್ಲಿ ಮನಸೆಳೆಯುವ ಮತ್ತೊಂದು ನಾಣ್ಯ 'ಗೋಲ್ಡ್ ಬಗ್'. ಇದು ಎಡ್ಗರ್ ಅಲನ್ ಪೋರವರ 'ದಿ ಗೋಲ್ಡನ್ ಬಗ್'ನಿಂದ ಪ್ರೇರೇಪಣೆ ಪಡೆದ ವಿಶಿಷ್ಟ ಕಲಾಕೃತಿ. 1921ನೇ ಇಸವಿಯ ಎರಡು ಮೋರ್ಗನ್ ಡಾಲರ್ ನಾಣ್ಯಗಳಿಂದ ಮತ್ತು 2015 ರ ಐದು ಡಾಲರ್ ಚಿನ್ನದ ನಾಣ್ಯದಿಂದ ಇದನ್ನು ಕೆತ್ತಲಾಗಿದೆ. ಈ ವಿಶೇಷ ನಾಣ್ಯದ ತುದಿಯಲ್ಲಿರುವ ಯಾಂತ್ರಿಕ ವ್ಯವಸ್ಥೆಯನ್ನು ಒತ್ತಿದ್ದಾಗ ಜೀರುಂಡೆಯ ರೆಕ್ಕೆಗಳು ತೆರೆದು ಇನ್ನೇನು ಹಾರಲು ಸಿದ್ಧವೇನೋ ಅನ್ನುವಂತೆ ಕಾಣುತ್ತದೆ. ಅದರೊಳಗೆ 22 ಕ್ಯಾರಟ್ ಚಿನ್ನದಲ್ಲಿ ಸೂಕ್ಷ್ಮವಾಗಿ ಕೆತ್ತನೆ ಮಾಡಿರುವ ಒಳದೇಹವು ಮರೆಮಾಚುವುದು ಹಾಗೂ ತೆರೆದುಕೊಳ್ಳುವ ಚಮತ್ಕಾರವನ್ನು ನೋಡಬಹುದು.

ರೋಮನ್ ಬೂಟೀನ್ ಸುಮಾರು 50 ಬಗೆಯ ನಾಣ್ಯ ಕಲಾಕೃತಿಯನ್ನು ಗ್ರಾಹಕರ ಅಭಿರುಚಿಗೆ ತಕ್ಕಂತೆ ತಯಾರಿಸಿದ್ದಾನೆ. ಒಂದಕ್ಕಿಂತ ಒಂದು ಭಿನ್ನ ಹಾಗೂ ಅನನ್ಯ.

■ ವಿನಯ್‌ಕುಮಾರ್ ಬಿ.ಎಚ್.